# NEWS CLIPPINGS

**-Media Coverage Archive-**

## 01-08-2026 TO 31-08-2026

*Prajavani 01-08-2026*

### ಅಲೋಶಿಯಸ್ ವಿವಿಗೆ ಎನ್‌ಜಿಆರ್‌ಯು ಶ್ರೇಯಾಂಕ

ಮಂಗಳೂರು: ನಗರದ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಹಸಿರು ವಿಶ್ವವಿದ್ಯಾಲಯ ಶ್ರೇಯಾಂಕ (ಎನ್‌ಜಿಆರ್‌ಯು) 2026ರಲ್ಲಿ ರಾಷ್ಟ್ರಮಟ್ಟದಲ್ಲಿ 23ನೇ ಹಾಗೂ ರಾಜ್ಯಮಟ್ಟದಲ್ಲಿ 4ನೇ ಸ್ಥಾನ ಲಭಿಸಿದೆ.

ಗ್ರೀನ್ ಮೆಂಟರ್ಸ್ ನಡೆಸಿದ ಮೌಲ್ಯಮಾಪನದ ನಂತರ ವಿಶ್ವವಿದ್ಯಾಲಯವು 100ರಲ್ಲಿ 91 ಅಂಕಗಳನ್ನುಗಳಿಸಿದ್ದು, ಇದು ಪರಿಸರ ಸುಸ್ಥಿರತೆ, ಹವಾಮಾನ ಕ್ರಮ, ಆಡಳಿತ, ಸಂಶೋಧನೆ, ನಾವೀನ್ಯತೆ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಗೆ ಸಂಸ್ಥೆಯ ಬದ್ಧತೆಗೆ ಸಿಕ್ಕ ಮಾನ್ಯತೆಯಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ರಾಷ್ಟ್ರೀಯ ಹಸಿರು ವಿಶ್ವವಿದ್ಯಾಲಯ ಶ್ರೇಯಾಂಕವನ್ನು ಸುಸ್ಥಿರತೆ ಆಡಳಿತ ಮತ್ತು ನಾಯಕತ್ವ, ಕ್ಯಾಂಪಸ್ ಜೀವವೈವಿಧ್ಯ ಮತ್ತು ಹಸಿರು ಹೊದಿಕೆ, ಇಂಗಾಲ ಮತ್ತು ಹವಾಮಾನ ಕ್ರಿಯೆ, ಹಸಿರು ಮೂಲಸೌಕರ್ಯ ಮತ್ತು ಇಂಧನ ದಕ್ಷತೆ, ಸುಸ್ಥಿರತೆಗಾಗಿ ಸಂಶೋಧನೆ ಮತ್ತು ನಾವೀನ್ಯತೆ, ಪಠ್ಯಕ್ರಮ ಮತ್ತು ಶಿಕ್ಷಣಶಾಸ್ತ್ರದಲ್ಲಿ ಸುಸ್ಥಿರತೆ, ನೀರು ನಿರ್ವಹಣೆ ಮತ್ತು ಸಂರಕ್ಷಣೆ, ಸುಸ್ಥಿರ ಸಾರಿಗೆ, ತ್ಯಾಜ್ಯ ನಿರ್ವಹಣೆ ಮತ್ತು ವೃತ್ತಾಕಾರದ ಆರ್ಥಿಕತೆ ಮತ್ತು ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಔಟ್ರೀಚ್ ಸೇರಿದಂತೆ ಹತ್ತು ಪ್ರಮುಖ ಅಂಶಗಳ ಆಧಾರದಲ್ಲಿ ನೀಡಲಾಗುತ್ತದೆ.

ಅಲೋಶಿಯಸ್ ವಿವಿಯನ್ನು ನ್ಯೂಯಾರ್ಕ್‌ನಲ್ಲಿ ನಡೆಯಲಿರುವ 10ನೇ ಎನ್‌ವೈಸಿ ಹಸಿರು ಶಾಲಾ ಸಮ್ಮೇಳನ 2026ರಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಅಲ್ಲಿ ಉನ್ನತ ಶಿಕ್ಷಣ ನಾಯಕರು, ನೀತಿ ನಿರೂಪಕರು, ಸುಸ್ಥಿರತೆ ತಜ್ಞರು, ಸಂಶೋಧಕರು ಮತ್ತು ಜಾಗತಿಕ ಪಾಲುದಾರರ ಅಂತರರಾಷ್ಟ್ರೀಯ ಸಭೆಯಲ್ಲಿ ಗೌರವಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

*Indian Express 01-08-2026*

### St Aloysius 4th in national green university ranking

MANGALURU: St Aloysius, Mangaluru has secured the 23rd Rank nationally, 4th Rank in Karnataka, and earned a prestigious Gold Rating in the National Green University Ranking (NGUR) 2026, one of India's comprehensive sustainability assessment frameworks for higher education institutions. The University achieved an overall score of 91 out of 100 following evidence-based evaluation.



St. Aloysius (Deemed-to-be University) in Mangaluru.

*The Hindu 04-08-2026*

# 801 students graduate at St. Aloysius convocation

**The Hindu Bureau**
MANGALURU

As many as 801 students graduated, with 56 receiving ranks, at the first convocation of St. Aloysius (Deemed-to-be University), Mangaluru, on Saturday.

The convocation was declared open by Fr. Dionysius Vaz, chancellor and provincial of the Karnataka Jesuit Province. An oath-taking ceremony was led by Fr. Melwin D'Cunha, pro-vice-chancellor. Graduates marked the occasion by turning their tassels, following which the university choir led the anthem.

Delivering the keynote address, C. Raj Kumar, vice-chancellor of O.P. Jindal Global University, Haryana, congratulated the graduates as pioneers of the institution's legacy. He reminded them, "Education is not about careers. It's about character." He stressed that knowledge must be embedded in values to become a transformative force for good. He urged the students to uphold integrity, compassion, and social responsibility while navigating an uncertain world.

Miloš Lichner, Vice-Chancellor of Trnava University, Slovakia, reflected on the resilience of Jesuit institutions across centuries. He emphasised that authority should be seen as responsibility, knowledge must be accompanied by humility, and leadership is best demonstrated through example.

Fr. Vaz highlighted the enduring values of Jesuit education – equity, discernment, empathy, and justice. He envisioned St. Aloysius rising to global eminence, becoming a cradle of innovation and producing leaders across

*The Hindu 04-08-2026*

# *The Hindu* newspaper collage competition held in Mangaluru

**The Hindu Bureau**
MANGALURU

The School of Commerce, Finance, and Accountancy at St. Aloysius (Deemed-to-be University) recently organised an inter-class collage competition titled 'News to Creativity - The Hindu Newspaper Collage' for Bachelor of Commerce (B.Com) students.

The competition encouraged students to transform newspaper clippings from *The Hindu* into creative visual presentations reflecting contemporary social and economic realities.

Participants explored a wide range of themes, including sports, culture, women's empowerment, inflation, and the country's economic condition.

Students demonstrated remarkable originality and critical thinking by presenting thought-provoking collages that connected current affairs with artistic expression.

The event aimed to enhance creativity, awareness of societal issues, and analytical interpretation of news content.

Class II-A secured first place, while Class III-B finished second.

The entries were evaluated based on originality, creativity, relevance to the theme, presentation, and effective use of newspaper clippings.

*Vijayavani 04-08-2026*

## 8ರಂದು ಅಲೋಶಿಯನ್ ಫೆಸ್ಟ್

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವತಿಯಿಂದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರೀಯಮಟ್ಟದ ಪ್ರತಿಭಾ ಉತ್ಸವ ಅಲೋಶಿಯನ್ ಫೆಸ್ಟ್-2026 ಆ.8ರಂದು ಬೆಳಗ್ಗೆ 9ಕ್ಕೆ ಸಂಸ್ಥೆಯ ಎಲ್.ಎಫ್. ರಸ್ಕಿನ್ಹಾ ಸಭಾಂಗಣದಲ್ಲಿ ನಡೆಯಲಿದೆ. ಡಿಜಿಟಲ್ ಕಂಟೆಂಟ್ ಕ್ರಿಯೇಟರ್ ಶರಣ್ ಚಿಲಿಂಬಿ ಉದ್ಘಾಟಿಸಲಿದ್ದಾರೆ. ರಾಷ್ಟ್ರ ಪ್ರಶಸ್ತಿ ವಿಜೇತ ಬಾಲ ಕಲಾವಿದ ಅತೀಶ್ ಎಸ್.ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಬ್ಬಗಳ ಹಬ್ಬ, ಸಾಂಸ್ಕೃತಿಕ ಹಬ್ಬ ಎಂಬ ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿವೆ. ಹಬ್ಬಗಳ ಹಬ್ಬದ ಸಾಮಾನ್ಯ, ವಾಣಿಜ್ಯ ವಿಭಾಗ, ವಿಜ್ಞಾನ ವಿಭಾಗಗಳಲ್ಲಿ 23 ಶೈಕ್ಷಣಿಕ ಹಾಗೂ ಸೃಜನಶೀಲ ಸ್ಪರ್ಧೆ, ಸಾಂಸ್ಕೃತಿಕ ಹಬ್ಬದಲ್ಲಿ ಭರತನಾಟ್ಯ, ಜಾನಪದ ಗೀತೆ, ಮೆಹೆಂದಿ, ಟ್ರಾಶನ್, ಕಸದಿಂದ ರಸ, ಥೀಮ್ ಆಧಾರಿತ ಪ್ರದರ್ಶನ, ವಿಜ್ಞಾನ ಪ್ರದರ್ಶನಗಳು ನಡೆಯಲಿದೆ. ಸಮಾರೋಪ ಸಮಾರಂಭ ಮಧ್ಯಾಹ್ನ 3.30ಕ್ಕೆ ನಡೆಯಲಿದ್ದು, ರೋಹನ್ ಕಾರ್ಪೊರೇಷನ್ ನಿರ್ದೇಶಕ ಡಿಯೋನ್ ಮೊಂತೇರೊ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ವೈಯಕ್ತಿಕ ವಿಭಾಗದ ವಿಜೇತ ವಿದ್ಯಾರ್ಥಿಗಳನ್ನು ಪ್ರಶಸ್ತಿ ಪತ್ರ, ಫಲಕದೊಂದಿಗೆ ಗೌರವಿಸಲಾಗುವುದು. ಅತ್ಯುತ್ತಮ ಪ್ರದರ್ಶನ ನೀಡಿದ ಕಾಲೇಜು ತಂಡಕ್ಕೆ ಸಮಗ್ರ ವಿಜೇತ ಫಲಕ, ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ರನ್ನರ್ಸ್-ಅಪ್ ಫಲಕ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

*Indian Express 04-08-2026*

# 100 students compete in 24-hour hackathon

EXPRESS NEWS SERVICE
@ Mangaluru

ONE hundred engineering students from across the coastal region participated in CODE KUDLA 2026, a 24-hour hackathon organised by Avishkar AI at wrkwrk, Kottara Chowki, showcasing Mangaluru's growing technology talent and innovative Artificial Intelligence (AI)-based solutions.

The participants were shortlisted from more than 500 applicants representing over 15 institutions, including Manipal University, NITK Surathkal, Yenepoya University, Sahyadri College of Engineering and Management, St Joseph Engineering College and St Aloysius College.

The hackathon challenged students to develop AI-powered solutions under three themes - AI for Healthcare, AI for Smart Cities and Agentic AI for Business Automation. Several projects focused on issues relevant to the coastal region, including monsoon flooding, traffic management, coastal safety and smart governance.

The first prize of Rs 25,000 went to Team NITK The Second for developing a smart-city digital twin platform to support urban planning and administration. Team Sarvam secured the second prize of Rs 10,000 for its AI-driven developer automation solution, while Debug Thugs won the third prize of Rs 5,000 for an AI-assisted telemedicine platform designed to help doctors diagnose illnesses and prescribe treatment remotely. The total prize pool was Rs 40,000.

The event was held from August 1 to 2, with teams conceptualising, building and presenting working AI solutions within 24 hours. Projects were evaluated by Adarsh Prabhu of Niveus Solutions and Vineet Lasrado of Hackerspace Mangalore. Manjunath, founder of Sitaara, addressed the participants.

Organisers said the hackathon aimed to showcase Mangaluru's engineering talent and strengthen efforts to attract technology companies, Global Capability Centres (GCCs) and investment to the region under the broader Silicon Beach Initiative.



Students taking part in the hackathon | EXPRESS



ESTD : 1880

*Times of India 04-08-2026*

## St Aloysius to host national-level fest for PU students

St Aloysius (Deemed to be University), Mangaluru, will host Aloysian Fest 2026, a one-day national-level fest for pre-university students, under the theme 'Nurturing talent, celebrating excellence' at 9am Saturday at LF Rasquinha Hall, LCRI Block. Content creator Sharan Chillimbi will be the chief guest, while Athish S Shetty, recipient of the National Award as a child artist, will be the guest of honour. Vice-chancellor Praveen Martis, SJ, will preside over the event. The fest will feature two categories: Festival of fests, comprising 23 academic, tech and creative events, and cultural fest, featuring seven cultural events. Dion Monteiro, director of Rohan Corporation, will be the chief guest.

*Prajavani 04-08-2026*

### ಅಲೋಶಿಯಸ್: ಪರಿಗಣಿತ ವಿವಿ ಮಾನ್ಯತೆ ಬಳಿಕ ಕಾರ್ಯಕ್ರಮ

## 801 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯು ಪರಿಗಣಿತ ವಿಶ್ವವಿದ್ಯಾಲಯವಾಗಿ ಮಾನ್ಯತೆ ಪಡೆದ ನಂತರ ಮೊದಲ ಪದವಿ ಪ್ರದಾನ ಕಾರ್ಯಕ್ರಮವು ಶನಿವಾರ ನಡೆಯಿತು.

ಒಟ್ಟು 801 ವಿದ್ಯಾರ್ಥಿಗಳು ಪದವಿ ಪಡೆದರು. ಅವರಲ್ಲಿ 56 ಮಂದಿ ರ‍್ಯಾಂಕ್ ಪಡೆದವರು, ಒಬ್ಬರು ವಿಶೇಷ ಪ್ರಶಸ್ತಿ ಪಡೆದವರನ್ನು ಗೌರವಿಸಲಾಯಿತು.

ಹರಿಯಾಣದ ಒ.ಪಿ. ಜಿಂದಾಲ್ ಗ್ಲೋಬಲ್ ಯೂನಿವರ್ಸಿಟಿಯ ಕುಲಪತಿ ಪ್ರೊ. ಸಿ.ರಾಜಕುಮಾರ್ ಮುಖ್ಯ ಭಾಷಣ ಮಾಡಿದರು. ಗೌರವ ಅತಿಥಿಯಾಗಿದ್ದ ಟ್ರ್ನಾವಾ ಯೂನಿವರ್ಸಿಟಿಯ ಕುಲಪತಿ ಪ್ರೊ. ಮಿಲೋಶ್ ಲಿಚ್ನರ್ ಮಾತನಾಡಿ, 'ಜ್ಞಾನವು ವಿನಮ್ರತೆಯೊಂದಿಗೆ ಇರಬೇಕು, ನಾಯಕತ್ವವನ್ನು ಉದಾಹರಣೆಯ ಮೂಲಕ ತೋರಿಸಬೇಕು' ಎಂದರು.

ಕರ್ನಾಟಕ ಜೇಸೂಯಿಟ್ ಪ್ರಾಂತ್ಯದ ಪ್ರಾಂತಾಧಿಕಾರಿ ಫಾ. ಡಯೋನಿಸಿಯಸ್ ವಾಜ್, ಕುಲಾಧಿಪತಿ ಫಾ. ಮೆಲ್ವಿನ್ ಡಿಕುನ್ಹಾ, ಕುಲಪತಿ ಪ್ರವೀಣ್ ಮಾರ್ಟಿಸ್, ಕುಲಸಚಿವ ರೊನಾಲ್ಡ್ ನಜರೇತ್, ಫಾ. ಬ್ರಿಯಾನ್ ಪರೇರಾ ಉಪಸ್ಥಿತರಿದ್ದರು. ವೈಶಾಲಿ ರೈ ವಂದಿಸಿದರು. ವಿದ್ಯಾ ವಿನುತಾ ಡಿಸೋಜ, ವಿಶಾಲ್ ನಾಯಕ್ ನಿರೂಪಿಸಿದರು.




ಸೇಂಟ್ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಪದವಿ ಪ್ರದಾನ ಸಮಾರಂಭ ನಡೆಯಿತು

*Deccan Herald 21-08-2026*

## Christianity must actively confront persistent social evils: Bishop

MANGALURU, DHNS: Christianity must actively confront persistent social evils, such as caste and gender discrimination in India, Bishop of Mangalore Fr Peter Paul Saldanha emphasised on Thursday.

He was speaking at a symposium, on 'Christian Thought in India: Context, Culture and Social Transformation', organised by Chair in Christianity, Mangalore University, in collaboration with St Joseph's Inter-diocesan Seminary, Jeppu, at the seminary's Centenary Memorial Hall. St Aloysius Deemed-to-be-University VC Fr Praveen Martis was felicitated on being conferred the honorary rank of Colonel and appointed as Colonel Commandant of National Cadet Corps (NCC) in July.



ESTD : 1880

*Prajavani 21-08-2026*

## ಭಾರತದಲ್ಲಿ ಕ್ರೈಸ್ತ ಚಿಂತನೆ: ಜೆಪ್ಪು ಸೆಮಿನರಿಯಲ್ಲಿ ರಾಷ್ಟ್ರೀಯ ವಿಚಾರಸಂಕಿರಣ

# ‘ಸಾರ್ವತ್ರಿಕ ಸಹೋದರತ್ವ ನೆಲೆಗೊಳ್ಳಲಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯದ ಕ್ರೈಸ್ತ ಅಧ್ಯಯನ ಪೀಠ ಹಾಗೂ ಜೆಪ್ಪುವಿನ ಸಂತ ಜೋಸೆಫರ ಅಂತರ- ಧರ್ಮಕ್ಷೇತ್ರೀಯ ಸೆಮಿನರಿಯ ಸಹಯೋಗದಲ್ಲಿ ‘ಭಾರತದಲ್ಲಿ ಕ್ರೈಸ್ತ ಚಿಂತನೆ: ಸಂದರ್ಭ, ಸಂಸ್ಕೃತಿ ಮತ್ತು ಸಾಮಾಜಿಕ ಪರಿವರ್ತನೆ’ ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರಸಂಕಿರಣವು ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯ ಶತಮಾನೋತ್ಸವ ಸ್ಮಾರಕ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಮಂಗಳೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಪೀಟರ್ ಪಾವ್ಲ್ ಸಲ್ಡಾನ, ಭಾರತದಲ್ಲಿ ಜಾತಿ ಮತ್ತು ಲಿಂಗ ತಾರತಮ್ಯದಂತಹ ಸಾಮಾಜಿಕ ಪಿಡುಗುಗಳನ್ನು ಕ್ರೈಸ್ತ ಧರ್ಮವು ಸಮರ್ಥವಾಗಿ ಎದುರಿಸಬೇಕು. ಪೋಪ್ ಫ್ರಾನ್ಸಿಸ್ ಕರೆಯಂತೆ ಪ್ರತಿಯೊಬ್ಬ ಮನುಷ್ಯನೂ ನಮ್ಮ ಸಹೋದರ-ಸಹೋದರಿ ಎಂದು ಭಾವಿಸಬೇಕು. ಅಸಡ್ಡೆಯಿಂದ ಕರುಣೆಯೆಡೆಗೆ, ಬಹಿಷ್ಕಾರದಿಂದ ಒಳಗೊಳ್ಳುವಿಕೆಯೆಡೆಗೆ ಚಲಿಸಬೇಕು. ಸಾರ್ವತ್ರಿಕ ಸಹೋದರತ್ವ ನೆಲೆಗೊಳ್ಳುವಂತೆ ನೋಡಿಕೊಳ್ಳಬೇಕು ಎಂದರು.

ಸಮಾಜ ವಿಜ್ಞಾನಿ ಪ್ರೊ. ವಲೇರಿಯನ್ ರೋಡ್ರಿಗಸ್ ಮಾತನಾಡಿ, ಸಮಕಾಲೀನ ಸಾಮಾಜಿಕ ಸವಾಲುಗಳನ್ನು ಎದುರಿಸಲು ಭಾರತೀಯ ಕ್ರೈಸ್ತ ಚಿಂತನೆ ಅಳವಡಿಸಿಕೊಳ್ಳಬೇಕು ಎಂದರು. ಎನ್‌ಸಿಸಿ ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನ ಕರ್ನಲ್ ಕಮಾಂಡೆಂಟ್ ಆಗಿ ನೇಮಕಗೊಂಡಿರುವ ಸೇಂಟ್ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಪ್ರವೀಣ್ ಮಾರ್ಟಿಸ್ ಅವರನ್ನು ಸನ್ಮಾನಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಕೊಂಕಣಿ ಅಧ್ಯಯನ ಪೀಠದ ಮುಖ್ಯಸ್ಥೆ ಪ್ರೀತಿ ಡಿಸೋಜ, ವಿವಿ ಸಿಂಡಿಕೇಟ್ ಸದಸ್ಯೆ ಜುಡಿತ್ ಮೆಂಡೋನ್ಸಾ, ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯ ರೆಕ್ಟರ್ ಫಾ. ರಾಜೇಶ್ ಮೆಲ್ವಿನ್ ರೊಸಾರಿಯೊ, ಸುನಿಲ್ ಜಾರ್ಜ್ ಡಿಸೋಜ ಉಪಸ್ಥಿತರಿದ್ದರು. ನಂತರ ಗೋಷ್ಠಿಗಳು ನಡೆದವು.




ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಫಾ. ಪ್ರವೀಣ್ ಮಾರ್ಟಿಸ್ ಅವರನ್ನು ಸನ್ಮಾನಿಸಲಾಯಿತು

*Vijayakarnataka 21-08-2026*

# ‘ಸಾಮಾಜಿಕ ಪಿಡುಗನ್ನು ಕ್ರೈಸ್ತ ಸಮುದಾಯ ಎದುರಿಸಲಿ’

▪ **ವಿಕ ಸುದ್ದಿಲೋಕ** ಮಂಗಳೂರು

ಮಂಗಳೂರು ವಿಶ್ವವಿದ್ಯಾಲಯದ ಕ್ರೈಸ್ತ ಅಧ್ಯಯನ ಪೀಠ ಹಾಗೂ ಜಪ್ಪು ಸಂತ ಜೋಸೆಫರ ಸೆಮಿನರಿಯ ಸಹಯೋಗದಲ್ಲಿ ಭಾರತದಲ್ಲಿ ಕ್ರೈಸ್ತ ಚಿಂತನೆ: ಸಂಸ್ಕೃತಿ, ನಂಬಿಕೆ ಮತ್ತು ಸಾಮಾಜಿಕ ಪರಿವರ್ತನೆ ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಗುರುವಾರ ಜಪ್ಪು ಸಂತ ಜೋಸೆಫರ ಸೆಮಿನರಿಯಲ್ಲಿ ನಡೆಯಿತು.

ಉದ್ಘಾಟಿಸಿ ಮಾತನಾಡಿದ ಮಂಗಳೂರು ಧರ್ಮಪ್ರಾಂತ್ಯದ ಬಿಷಪ್ ಡಾ.ಪೀಟರ್ ಪಾವ್ಲ್ ಸಲ್ಡಾನ, ಭಾರತದಲ್ಲಿ ಜಾತಿ ಮತ್ತು ಲಿಂಗ ತಾರತಮ್ಯದಂತಹ ಸಾಮಾಜಿಕ ಪಿಡುಗುಗಳನ್ನು ಕ್ರೈಸ್ತ ಸಮುದಾಯ ಸಕ್ರಿಯವಾಗಿ ಎದುರಿಸಬೇಕು. ಪ್ರತಿಯೊಬ್ಬ ಮನುಷ್ಯನೂ ನನ್ನ ಸಹೋದರ– ಸಹೋದರಿಯಾಗಿದ್ದು, ಅಸಡ್ಡೆಯಿಂದ ಕರುಣೆಯೆಡೆಗೆ, ಬಹಿಷ್ಕಾರದಿಂದ ಒಳಗೊಳ್ಳುವಿಕೆಯೆಡೆಗೆ ತೆರಳಬೇಕು. ಬಂಧುತ್ವ ನೆಲೆಗೊಳ್ಳುವಂತೆ ನೋಡಿಕೊಳ್ಳಬೇಕು ಎಂದರು.

ಮಂಗಳೂರು ವಿಶ್ವವಿದ್ಯಾಲಯದ ಕೊಂಕಣಿ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ.ಪ್ರೀತಿ ಡಿಸೋಜ ಮಾತನಾಡಿ, ಚರ್ಚ್‌ನಲ್ಲಿರುವ ನಂಬಿಗಸ್ತ ಸಮುದಾಯ ಜನರು ಒಟ್ಟಾಗಿ ಬದಲಾವಣೆಯನ್ನು ತರುವ ಪ್ರಜಾಸತ್ತಾತ್ಮಕ ಆದರ್ಶಗಳನ್ನು ಬಿಂಬಿಸುತ್ತದೆ ಎಂದು ಹೇಳಿದರು.

ನ್ಯಾಷನಲ್ ಕೆಡೆಟ್ ಕಾರ್ಪ್‌ನ ಕರ್ನಲ್ ಶ್ರೇಣಿಯೊಂದಿಗೆ ಕರ್ನಲ್ ಕಮಾಂಡೆಂಟ್ ಆಗಿ ನೇಮಕಗೊಂಡಿರುವ ಮಂಗಳೂರಿನ ಸಂತ ಅಲೋಶಿಯಸ್ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಅವರನ್ನು ಸನ್ಮಾನಿಸಲಾಯಿತು. ಜಪ್ಪು ಸಂತ ಜೋಸೆಫ್ ಸೆಮಿನರಿಯ ರೆಕ್ಟರ್ ಡಾ. ರಾಜೇಶ್ ಮೆಲ್ವಿನ್ ರೊಸಾರಿಯೊ, ಮಂಗಳೂರು ವಿವಿಯ ಸಿಂಡಿಕೇಟ್ ಸದಸ್ಯರಾದ ಜುಡಿತ್ ಮೆಂಡೋನ್ಸಾ, ವಿವಿಯ ಕ್ರೈಸ್ತ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಸುನಿಲ್ ಜಾರ್ಜ್ ಡಿಸೋಜ ಉಪಸ್ಥಿತರಿದ್ದರು. ಬ್ರ.ಜ್ಯೂನ್ ಡಿಸೋಜ ನಿರೂಪಿಸಿ, ಕಾಲೇಜಿನ ಜಾನೆಟ್ ಎ.ಸಿ. ಸಹಕರಿಸಿದರು.




ಮಂಗಳೂರಿನ ಸಂತ ಅಲೋಶಿಯಸ್ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಅವರನ್ನು ಸನ್ಮಾನಿಸಲಾಯಿತು.

### ಸಾಮಾಜಿಕ ಸುಧಾರಣೆಗೆ ಸ್ವದೇಶಿ ಚಿಂತಕರ ಪ್ರಭಾವ

ಸಮಾಜ ವಿಜ್ಞಾನಿ ಹಾಗೂ ಹೊಸದಿಲ್ಲಿಯ ಜೆಎನ್‌ಯು ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ ಪ್ರೊ.ವಲೇರಿಯನ್ ರೋಡ್ರಿಗಸ್ ಮಾತನಾಡಿ, ಭಾರತದ ಸಾಮಾಜಿಕ ಸುಧಾರಣೆ, ಪ್ರಜಾಪ್ರಭುತ್ವ ಮತ್ತು ಜಾತಿ ವಿರೋಧಿ ಚಳುವಳಿಗಳ ಮೇಲೆ ಮಹಾತ್ಮ ಗಾಂಧಿ ಮತ್ತು ಡಾ. ಅಂಬೇಡ್ಕರ್‌ರಂತಹ ಸೃಜನಶೀಲ ಸ್ವದೇಶಿ ಚಿಂತಕರು ಪ್ರಭಾವ ಬೀರಿದ್ದರು. ಸಮಕಾಲೀನ ಸಾಮಾಜಿಕ ಸವಾಲುಗಳನ್ನು ಎದುರಿಸಲು ಭಾರತೀಯ ಕ್ರೈಸ್ತ ಚಿಂತನೆಯೊಂದಿಗೆ ತೊಡಗಿಕೊಳ್ಳುವ ಅಗತ್ಯವಿದೆ ಎಂದರು.

*News Trail 21-08-2026*

# National symposium explores Christian thought in India

**NT Correspondent**
Mangaluru

A National Symposium on "Christian Thought in India: Context, Culture and Social Transformation" was held at St. Joseph's Inter-diocesan Seminary, Jeppu, on Thursday, August 20, 2026. Organised by the Chair in Christianity at Mangalore University in collaboration with the seminary, the day-long symposium brought together academicians, researchers, theologians and students to discuss the historical, cultural and social evolution of Christianity in India.

Held in connection with Konkani Manyatha Divas, the symposium highlighted the contribution of Christianity to education, healthcare, social reform and human dignity. Most Rev. Dr. Peter Paul Saldanha, Bishop of Mangalore, presided over the inaugural session. Prof. Valerian Rodrigues, Dr. Preethi Dsouza and Judith Mendonca were among the chief guests, while senior representatives from St Aloysius University and St. Joseph's Seminary also participated.

Prof. Valerian Rodrigues spoke about the influence of Christian thought and Indian reformers on social



reform, democracy and anti-caste movements. Dr. Preethi Dsouza reflected on constitutional values of liberty, equality, fraternity and justice. Bishop Saldanha emphasized the importance of addressing caste and gender discrimination, calling for greater compassion, inclusion and universal brotherhood. The keynote address was delivered by Rev. Dr. Praveen Martis SJ, who was also felicitated for being conferred the honorary rank of Colonel and appointed Colonel Commandant of the National Cadet Corps by the Government of India.

The academic programme featured four technical sessions with ten research papers. Presentations covered themes including Christian leadership in social reform, digital culture, indigenous praxis, contextual biblical hermeneutics, education and healthcare. The symposium also featured cultural programmes by the seminarians of St. Joseph's Inter-diocesan Seminary and Gumta artists, bringing together academic reflection and local cultural expression.

*Varthabharathi 21-08-2026*

# ಸಾಮಾಜಿಕ ಪಿಡುಗುಗಳ ವಿರುದ್ಧ ಸಕ್ರಿಯ ಹೋರಾಟ ಅಗತ್ಯ: ಮಂಗಳೂರು ಬಿಷಪ್

ಮಂಗಳೂರು, ಆ.20: ಭಾರತದಲ್ಲಿ ವ್ಯಾಪಕವಾಗಿರುವ ಜಾತಿ ವ್ಯವಸ್ಥೆ ಮತ್ತು ಲಿಂಗ ತಾರತಮ್ಯದಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಕ್ರೈಸ್ತರು ಸಕ್ರಿಯವಾಗಿ ಹೋರಾಡಬೇಕು ಎಂದು ಮಂಗಳೂರು ಧರ್ಮಪ್ರಾಂತದ ಬಿಷಪ್ ರೆ.ಫಾ. ಡಾ.ಪೀಟರ್ ಪಾಲ್ ಸಲ್ದಾನ ಕರೆ ನೀಡಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಕ್ರೈಸ್ತ ಅಧ್ಯಯನ ಪೀಠ ಹಾಗೂ ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯ ಸಹಯೋಗದಲ್ಲಿ ಗುರುವಾರ ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯ ಶತಮಾನೋತ್ಸವ ಸ್ಮಾರಕ ಸಭಾಂಗಣದಲ್ಲಿ 'ಭಾರತದಲ್ಲಿ ಕ್ರೈಸ್ತ ಚಿಂತನೆ: ಸಂದರ್ಭ, ಸಂಸ್ಕೃತಿ ಮತ್ತು ಸಾಮಾಜಿಕ ಪರಿವರ್ತನೆ' ಎಂಬ ವಿಷಯದ ಬಗ್ಗೆ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕೋವಿಡ್ ಕಾಲದಲ್ಲಿ ಪೋಪ್ ಫ್ರಾನ್ಸಿಸ್ ಜಾಗತಿಕ ಸಹೋದರತ್ವದ ಕುರಿತಾಗಿ ವ್ಯಕ್ತಪಡಿಸಿದ್ದ ಆಶಯವನ್ನು ಉಲ್ಲೇಖಿಸಿದ ಬಿಷಪ್ ಪೀಟರ್ ಸಲ್ದಾನ, ಸಮಾಜದಲ್ಲಿ 'ಬಂಧುತ್ವ' (ಸಾರ್ವತ್ರಿಕ ಸಹೋದರತೆ) ಬೆಳೆಸಲು ಸದ್ಭಾವನೆ ಹೊಂದಿರುವ ಪ್ರತಿಯೊಬ್ಬರೂ ಉದಾಸೀನತೆ ತೊರೆದು ಕರುಣೆ ಮತ್ತು ಪರಸ್ಪರ ಬಾಂಧವ್ಯದತ್ತ ಸಾಗಬೇಕು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹೊಸದಿಲ್ಲಿಯ ಜವಾಹರಲಾಲ್ ನೆಹರೂ ವಿವಿಯ ಮಾಜಿ ಪ್ರಾಧ್ಯಾಪಕ ಪ್ರೊ.ವಲೇರಿಯನ್ ರೋಡ್ರಿಗಸ್, ಭಾರತೀಯ ಸಂವಿಧಾನದಲ್ಲಿ ಬೈಬಲ್‌ನ ಮೌಲ್ಯಗಳಾದ ಸಮಾನತೆ, ಭ್ರಾತೃತ್ವ ಮತ್ತು ನ್ಯಾಯವು ಪ್ರತಿಧ್ವನಿಸಿವೆ ಎಂದು



ಹೇಳಿದರು.

ಮಂಗಳೂರು ವಿವಿ ಕೊಂಕಣಿ ಅಧ್ಯಯನ ಪೀಠದ ಮುಖ್ಯಸ್ಥೆ ಡಾ.ಪ್ರೀತಿ ಡಿಸೋಜ ಮಾತನಾಡಿದರು.

ಸನ್ಮಾನ: ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ವಿಚಾರ ಸಂಕಿರಣದಲ್ಲಿ ಆಶಯ ಭಾಷಣ ಮಾಡಿದರು.

ಇದೇ ವೇಳೆ ನ್ಯಾಷನಲ್ ಕೆಡೆಟ್ ಕಾರ್ಪ್ಸ್(ಎನ್‌ಸಿಸಿ)ನ ಕರ್ನಲ್ ಕಮಾಂಡೆಂಟ್ ಆಗಿ ನೇಮಕಗೊಂಡಿರುವ ಡಾ.ಪ್ರವೀಣ್ ಮಾರ್ಟಿಸ್‌ರನ್ನು ಸನ್ಮಾನಿಸಲಾಯಿತು.

ಸಂತ ಆಗ್ನೆಸ್ ಪಿಯು ಕಾಲೇಜಿನ ಸಿಸ್ಟರ್ ಜಾಸ್ಮಿನ್ ಅಭಿನಂದನಾ ಭಾಷಣ ಮಾಡಿದರು.

ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯೆ ಜುಡಿತ್ ಮೆಂಡೋನ್ಸ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಂಗಳೂರು ವಿಶ್ವವಿದ್ಯಾನಿಲಯದ ಕ್ರೈಸ್ತ ಅಧ್ಯಯನ ಪೀಠದ ಮುಖ್ಯಸ್ಥ ಡಾ.ಸುನೀಲ್ ಜಾರ್ಜ್ ಡಿಸೋಜ ಸ್ವಾಗತಿಸಿದರು. ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯ ಡಾ.ರಾಜೇಶ್ ಮೆಲ್ವಿನ್ ರೊಸಾರಿಯೊ ವಂದಿಸಿದರು. ಜಸ್ಟಿನ್ ಡಿಸೋಜ ಕಾರ್ಯಕ್ರಮ ನಿರೂಪಿಸಿದರು.

ಶೈಕ್ಷಣಿಕ ಗೋಷ್ಠಿ: ಮಧ್ಯಾಹ್ನದ ಬಳಿಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ನಾಲ್ಕು ತಾಂತ್ರಿಕ ಗೋಷ್ಠಿಗಳು ನಡೆದವು. ಇದರಲ್ಲಿ ಹತ್ತು ಸಂಶೋಧನಾ ಪ್ರಬಂಧಗಳು ಮಂಡನೆಯಾದವು.

ಕೊಂಕಣಿ ಮಾನ್ಯತಾ ದಿನಾಚರಣೆಯೊಂದಿಗೆ ಆಯೋಜಿಸಲಾದ ಈ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸುಧಾರಣೆಗೆ ಕ್ರೈಸ್ತ ಧರ್ಮದ ಕೊಡುಗೆಗಳ ಕುರಿತು ಚರ್ಚಿಸಲಾಯಿತು.

ಫಾ.ಫ್ಲೇವಿಯನ್ ರಾಜಕಿರಣ್ ಲೋಬೊ ನಿರ್ದೇಶನದಲ್ಲಿ ಜೆಪ್ಪುವಿನ ಸಂತ ಜೋಸೆಫರ ಸೆಮಿನರಿಯ ವಿದ್ಯಾರ್ಥಿಗಳಿಂದ 'ಸುರಾಂಜಲಿ' ಎಂಬ ಸಂಗೀತ ರಸಮಂಜರಿ ಸಾಂಸ್ಕೃತಿಕ ಕಾರ್ಯಕ್ರಮ, ವಾಲ್ಟರ್ ಕ್ರಾಸ್ತಾ ನಿರ್ದೇಶನದಲ್ಲಿ ಗುಮಟ ದಾಯ್ಜ್ ತಂಡದಿಂದ 'ಗುಂಮ್ಟ' ಜಾನಪದ ಸಂಗೀತದ ಪ್ರದರ್ಶನ ನಡೆಯಿತು.

*Udayavani 21-08-2026*

# ಸಾಮಾಜಿಕ ಪಿಡುಗು ನಿವಾರಣೆಗೆ ಶ್ರಮಿಸಿ

## ಭಾರತದಲ್ಲಿ ಕ್ರೈಸ್ತಚಿಂತನೆ: ವಿಚಾರ ಸಂಕಿರಣದಲ್ಲಿ ಬಿಷಪ್ ಡಾ|ಸಲ್ಡಾನ್ಹಾ

**ಮಹಾನಗರ, ಆ.20:** ಮಂಗಳೂರು ವಿ.ವಿ. ಕ್ರೈಸ್ತ ಅಧ್ಯಯನ ಪೀಠ, ಜಪ್ಪು ಸಂತ ಜೋಸೆಫರ ಸೆಮಿನರಿಯ ಸಹಯೋಗದಲ್ಲಿ ಭಾರತ ದಲ್ಲಿ ಕ್ರೈಸ್ತ ಚಿಂತನೆ: ಸಂಸ್ಕೃತಿ, ನಂಬಿಕೆ ಮತ್ತು ಸಾಮಾಜಿಕ ಪರಿವರ್ತನೆ ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಗುರುವಾರ ಜಪ್ಪು ಸಂತ ಜೋಸೆಫರ ಸೆಮಿನರಿಯಲ್ಲಿ ನಡೆಯಿತು.

ಮಂಗಳೂರು ಧರ್ಮ ಪ್ರಾಂತ್ಯದ ಧರ್ಮಾಧ್ಯಕ್ಷ ಡಾ| ಪೀಟರ್ ಪಾವ್ಲ್ ಸಲ್ಡಾನ್ಹಾ ಅವರು ಉದ್ಘಾಟಿಸಿ, ಭಾರತದಲ್ಲಿ ಜಾತಿ ಮತ್ತು ಲಿಂಗ ತಾರತಮ್ಯದಂತಹ ಸಾಮಾಜಿಕ ಪಿಡುಗುಗಳನ್ನು ಕ್ರೈಸ್ತ ಸಮುದಾಯ ಸಕ್ರಿಯವಾಗಿ ಎದುರಿಸಬೇಕು. ಕೋವಿಡ್ ಕಾಲದಲ್ಲಿ ಪೋಪ್ ಫ್ರಾನ್ಸಿಸ್ ಅವರು ನೀಡಿದ ಸಾರ್ವತ್ರಿಕ ಭ್ರಾತೃತ್ವದ ಕರೆಗೆ ಓಗೊಟ್ಟು ಪ್ರತಿಯೊಬ್ಬ ಮನುಷ್ಯನೂ ನಮ್ಮ ಸಹೋದರ-ಸಹೋದರಿಯಾಗಿದ್ದು ಅಸಡ್ಡೆಯಿಂದ ಕರುಣೆಯೆಡೆಗೆ, ಬಹಿಷ್ಕಾರದಿಂದ ಒಳಗೊಳ್ಳುವಿಕೆಯೆಡೆಗೆ ತೆರಳಬೇಕು. ಬಂಧುತ್ವ ನೆಲೆಗೊಳ್ಳುವಂತೆ ನೋಡಿಕೊಳ್ಳಬೇಕು ಎಂದರು.

ಮಂಗಳೂರು ವಿಶ್ವವಿದ್ಯಾನಿಲಯದ ಕೊಂಕಣಿ ಅಧ್ಯಯನ ಪೀಠದ ಮುಖ್ಯಸ್ಥೆ ಡಾ| ಪ್ರೀತಿ ಡಿ'ಸೋಜಾ ಮಾತನಾಡಿದರು.

ಎನ್‌ಸಿಸಿಯ ಕರ್ನಲ್ ಶ್ರೇಣಿಯೊಂದಿಗೆ ಕರ್ನಲ್ ಕಮಾಂಡೆಂಟ್ ಆಗಿ ನೇಮಕಗೊಂಡಿರುವ ಮಂಗಳೂರಿನ ಸಂತ ಅಲೋಶಿಯಸ್ ವಿವಿಯ ಕುಲಪತಿ ವಂ|ಡಾ| ಪ್ರವೀಣ್ ಮಾರ್ಟಿಸ್ ಎಸ್.ಜೆ. ಅವರನ್ನು ಸಮ್ಮಾನಿಸಲಾಯಿತು.

ಜಪ್ಪು ಸಂತ ಜೋಸೆಫ್ ಸೆಮಿನರಿಯ ರೆಕ್ಟರ್ ವಂ|ಡಾ| ರಾಜೇಶ್ ಮೆಲ್ವಿನ್ ರೊಸಾರಿಯೊ ಮಂಗಳೂರು ವಿವಿಯ ಸಿಂಡಿಕೇಟ್ ಸದಸ್ಯೆ ಜುಡಿತ್ ಮೆಂಡೋನ್ಸಾ ವಿವಿಯ ಕ್ರೈಸ್ತ ಅಧ್ಯಯನ ಪೀಠದ ಮುಖ್ಯಸ್ಥ ವಂ|ಡಾ| ಸುನಿಲ್ ಜಾರ್ಜ್ ಡಿ'ಸೋಜಾ ಇದ್ದರು.

ಬ್ರ| ಜಸ್ಟಿನ್ ಡಿ'ಸೋಜಾ ನಿರೂಪಿಸಿದರು ಸಂತ ಆಗ್ನೆಸ್ ಪಿಯು ಕಾಲೇಜಿನ ಸಿ. ಜಾನೆಟ್ ಎ.ಸಿ. ಸಹಕರಿಸಿದರು. ಸಾಮಾಜಿಕ ಸುಧಾರಣೆಯಲ್ಲಿ ಕ್ರೈಸ್ತ ನಾಯಕತ್ವ ಡಿಜಿಟಲ್ ಸಂಸ್ಕೃತಿ, ಸ್ಥಳೀಯ ಆಚರಣೆಗಳು ಬೈಬಲ್ ವ್ಯಾಖ್ಯಾನ, ಶಿಕ್ಷಣ-ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಕುರಿತು ಗೋಷ್ಠಿಗಳು ನಡೆದವು.



### ಸಾಮಾಜಿಕ ಸುಧಾರಣೆಗೆ ಸ್ವದೇಶಿ ಚಿಂತಕರ ಪ್ರಭಾವ

ದಿಲ್ಲಿಯ ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕ ಪ್ರೊ| ವಲೇರಿಯನ್ ರೋಡ್ರಿಗಸ್ ಮಾತನಾಡಿ, ಭಾರತದ ಸಾಮಾಜಿಕ ಸುಧಾರಣೆ, ಪ್ರಜಾಪ್ರಭುತ್ವ ಮತ್ತು ಜಾತಿ ವಿರೋಧಿ ಚಳವಳಿಗಳ ಮೇಲೆ ಸುವಾರ್ತೆ, ಮಹಾತ್ಮಾ ಗಾಂಧಿ ಮತ್ತು ಡಾ| ಬಿ.ಆರ್. ಅಂಬೇಡ್ಕರ್ ಅವರಂತಹ ಚಿಂತಕರು ಪ್ರಭಾವ ಬೀರಿದ್ದರು. ಸಮಕಾಲೀನ ಸಾಮಾಜಿಕ ಸವಾಲು ಎದುರಿಸಲು ಭಾರತೀಯ ಕ್ರೈಸ್ತ ಚಿಂತನೆಯೊಂದಿಗೆ ತೊಡಗಿಕೊಳ್ಳುವ ಅಗತ್ಯವಿದೆ ಎಂದರು.

*Udayavani 27-08-2026*

# ಎಐ ಯುಗದಲ್ಲಿ ಮಾಧ್ಯಮ ವಿಚಾರ: ಆ. 28ರಂದು ಕಾರ್ಯಾಗಾರ

**ಮಹಾನಗರ, ಆ.26:** ಸಂತ ಅಲೋಶಿಯಸ್ ಕಾಲೇಜಿನ ಸ್ಕೂಲ್ ಆಫ್ ಆರ್ಟ್ಸ್ ಮತ್ತು ಹ್ಯೂಮಾನಿಟಿಸ್ ನ ಮಾಧ್ಯಮ ಅಭ್ಯಾಸ ವಿಭಾಗ ಮತ್ತು ಸಮಾಜಶಾಸ್ತ್ರ ವಿಭಾಗದ ವತಿಯಿಂದ ಕೃತಕ ಬುದ್ಧಿಮತ್ತೆ ಯುಗದಲ್ಲಿ ಮಾಧ್ಯಮವನ್ನು ಎದುರಿಸುವುದು ಎಂಬ ವಿಷಯದ ಬಗ್ಗೆ ಆ. 28ರಂದು ಕಾರ್ಯಾಗಾರ ಆಯೋಜಿಸಲಾಗಿದೆ.

ಧೆನ್ಕನಲ್ ಐಐಎಂಸಿಯ ಮಾಜಿ ನಿರ್ದೇಶಕ ಡಾ| ಮೃನಲ್ ಕುಮಾರ್ ಚಟರ್ಜಿ ಅವರು ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಸಂತ ಅಲೋಶಿಯಸ್ ಸಂಸ್ಥೆಯ ಕುಲಪತಿ ವಂ|ಡಾ| ಪ್ರವೀಣ್ ಮಾರ್ಟಿಸ್, ಕುಲಸಚಿವ ಡಾ| ರೊನಾಲ್ಡ್ ನಝ್ರುತ್, ಡೀನ್ ಡಾ| ಮನೋಹರ್ ವಿ. ಸೆರಾವೊ, ವಿಭಾಗ ಮುಖ್ಯಸ್ಥರಾದ ಡಾ| ಜೋಲಿ ಜೋಸ್, ಡಾ| ಜೋನ್ಸ್ ಥೋಮಸ್ ಭಾಗವಹಿಸಲಿದ್ದಾರೆ ಎಂದು ಸಹಾಯಕ ಪ್ರಾಧ್ಯಾಪಕಿ ದೇವಿಶ್ರೀ ಶೆಟ್ಟಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ESTD : 1880

*Deccan Herald 28-08-2026*

# Lecture by Laxmeesha Tolpadi today

MANGALURU, DHNS: Eminent thinker Laxmeesha Tolpadi will present his philosophical reflections on 'Balipaada,' a novel by author Sreedhara Balagara, at the Sannidhya Hall, St Aloysius Deemed-to-be-University on August 28 at 4 pm.

Balipaada is a work portraying the life, philosophy, and socio-cultural shifts of the Kunbi community in Uttara Kannada district. Novelist Sreedhara Balagara will be present to share his thoughts on the background and creation of the work. Acclaimed storyteller Sachidananda Hegde, poet Nagaraj Apgal, and writer Kiranshyama (member of Ruthumana Publications) are traveling from Uttara Kannada district to participate in the literary discussions.

This special event is organized by the Department of Kannada, St Aloysius Deemed-to-be-University, in collaboration with Geleyara Balaga, Mangaluru.

*Prajavani 28-08-2026*

# ‘ಬಲಿಪಾದ’ ಕಾದಂಬರಿ ಬಿಡುಗಡೆ ಇಂದು

ಮಂಗಳೂರು: ಸಾಹಿತಿ ಪ್ರೊ. ಶ್ರೀಧರ ಬಳಗಾರ ಅವರ ‘ಬಲಿಪಾದ’ ಕಾದಂಬರಿಯು ಆ.28ರಂದು ಕರಾವಳಿಯಲ್ಲಿ ಬಿಡುಗಡೆಯಾಗಲಿದೆ. ಸೇಂಟ್ ಅಲೋಶಿಯಸ್ ಕಾಲೇಜಿನ ಸಾನ್ನಿಧ್ಯ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಕೃತಿ ಕುರಿತು ಮಾತನಾಡುವರು.

ಸೇಂಟ್ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಪ್ರವೀಣ್ ಮಾರ್ಟಿಸ್, ಕನ್ನಡ ವಿಭಾಗದ ಮುಖ್ಯಸ್ಥ ದಿನೇಶ್ ನಾಯಕ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

*Prajavani 28-08-2026*

# ಅಪರಿಚಿತ ಪ್ರಪಂಚದ ಸತ್ಯ ದರ್ಶನ

## 'ಬಲಿಪಾದ' ಕಾದಂಬರಿ ಬಿಡುಗಡೆ: ಲಕ್ಷ್ಮೀಶ್ ತೋಳ್ಪಾಡಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಆಧುನಿಕ ಪ್ರಪಂಚದ ಸ್ಪರ್ಶವಿಲ್ಲದ, ಆದಿಮ ಸ್ಥಿತಿಯಲ್ಲಿರುವ ಮುಗ್ಧ ಕುಣಬಿ ಸಮುದಾಯದ ಬದುಕನ್ನು ಪರಿಚಯಿಸುವ 'ಬಲಿಪಾದ'ವು ಪರಿಚಿತ ಪ್ರಪಂಚದಾಚೆಗಿನ ಅಪರಿಚಿತ ಜಗತ್ತಿನ ಸತ್ಯ ದರ್ಶನ ಮಾಡಿಸುತ್ತದೆ ಎಂದು ಚಿಂತಕ ಲಕ್ಷ್ಮೀಶ್ ತೋಳ್ಪಾಡಿ ಹೇಳಿದರು.

ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕೇತನ, ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಗೆಳೆಯರ ಬಳಗ ಜಂಟಿಯಾಗಿ ಶುಕ್ರವಾರ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ. ಶ್ರೀಧರ ಬಳಗಾರ ಅವರ 'ಬಲಿಪಾದ' ಕಾದಂಬರಿಯನ್ನು ಕರಾವಳಿಯಲ್ಲಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಅಪರಿಚಿತ ಪ್ರಪಂಚದೊಳಗೆ ಪರಿಚಿತವಾದ ಸಾಹಿತ್ಯ ಪ್ರಜ್ಞೆಯೊಂದರ ಮುಖಾಮುಖಿಯು ಕಾದಂಬರಿಯಾಗಿ ಅರಳಿದೆ. ಮುಗ್ಧ ಸಮುದಾಯದವೊಂದರ ಒಡನಾಟವನ್ನು ಸರಳೀಕರಣಗೊಳಿಸದ, ಸೈದ್ಧಾಂತಿಕ ಬಂಧನಕ್ಕೂ ಒಳಗಾಗದ, ಮಧ್ಯಮ ಸ್ಥಾಯಿಯಲ್ಲಿ ನಿರೂಪಿತವಾಗಿರುವ ಕಾದಂಬರಿಯು ಓದಿನ ಕೊನೆಯಲ್ಲಿ ಜೀವನ ಬಗ್ಗೆ ಆಳವಾದ ಪ್ರಶ್ನೆ ಮೂಡಿಸುತ್ತದೆ. ಆಧುನಿಕ ನಾಗರಿಕತೆಯ ಸೌಲಭ್ಯಕ್ಕಾಗಿ ಮುಗ್ಧ ಬುಡಕಟ್ಟು ಸಮುದಾಯದ



ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಧರ ಬಳಗಾರ ಅವರ 'ಬಲಿಪಾದ' ಕಾದಂಬರಿಯನ್ನು ಲಕ್ಷ್ಮೀಶ್ ತೋಳ್ಪಾಡಿ ಅನಾವರಣಗೊಳಿಸಿದರು

ಬದುಕನ್ನು ಬಲಿಕೊಟ್ಟು ನಾವು ಬೆಲೆ ತೆತ್ತಿರುವ ವಿಷಾದ ಕಾಡುತ್ತದೆ ಎಂದರು.

ಜೀವನಾನುಭವವನ್ನೇ ಪುನರ್ ಅಭಿನಯ ಮಾಡುವುದು ಸಾಹಿತ್ಯದ ಕೆಲಸ. ಆದರೆ, ರಂಜನೆಗಾಗಿ ಈ ಅಭಿನಯ ಮಾಡಿದರೆ ಅದು ಅರ್ಥ ಕಳೆದುಕೊಳ್ಳುತ್ತದೆ. ಅನುಕಂಪವು ಓದುಗನ ಹೃದಯದಲ್ಲಿ ಅನುರಣಿತವಾಗಿ ಕಂಪನ ಮೂಡಿಸಿದರೆ, ಅದು ಸತ್ಯದ ದರ್ಶನವಾಗುತ್ತದೆ. 'ಬಲಿಪಾದ' ಕೃತಿಯುದ್ದಕ್ಕೂ ಈ ಸತ್ಯವು ಗಾಢವಾಗಿ ಕಂಡುಬರುತ್ತದೆ ಎಂದು ಹೇಳಿದರು.

ಕೃತಿಕಾರ ಶ್ರೀಧರ ಬಳಗಾರ ಮಾತನಾಡಿ, 'ಲೇಖಕನಾಗಿ ಲಿಪಿಕಾರನ ಪಾತ್ರ ನಿರ್ವಹಿಸಿದ್ದೇನೆ. ಲಿಪಿಕಾರನಿಗೆ ನಿರ್ಲಿಪ್ತತೆ, ಚಿತ್ರಕಾರನಾಗಿ ವರ್ತಿಸುವ ತನ್ಮಯತೆ ಬೇಕು. ಯಾವ ಪಾತ್ರಗಳು ಜೀವಂತ ಸಮುದಾಯವನ್ನು ಪ್ರತಿನಿಧಿಸುತ್ತವೆಯೋ ಅವುಗಳ ಚಿತ್ರಣವನ್ನು ನಾನು ಲಿಪಿಕಾರನಾಗಿ ನಿರ್ವಹಿಸಿದ್ದೇನೆ. ಅಪರಿಚಿತವಾಗಿದ್ದ ಬುಡಕಟ್ಟು ಸಮುದಾಯದ ಪರಿಚಯ ಮಾಡಿಕೊಳ್ಳುವ ಪ್ರಯತ್ನವನ್ನು ನಿರಂತರ 12 ವರ್ಷಗಳಿಂದ ಮಾಡಿಕೊಂಡು ಬಂದೆ. ಊರೊಂದು ಮುಳುಗಡೆಯಾಗಿ ಇಡೀ ಒಂದು ಸಮುದಾಯ ಕಂಗೆಟ್ಟ ಸ್ಥಿತಿಯ ಚಿತ್ರಣ ಕಾದಂಬರಿಯಲ್ಲಿದೆ' ಎಂದರು.

ಶ್ರೀಪೂರ್ಣ ಜನಪದ ಗೀತೆ ಹಾಡಿದರು. ಪ್ರೊ. ಮಹಾಲಿಂಗ ಭಟ್ ಸ್ವಾಗತಿಸಿದರು.



ESTD : 1880

*Udayavani 31-08-2026*

# ಪ್ರೊ। ಶ್ರೀಧರ ಬಳಗಾರ ಅವರ 'ಬಲಿಪಾದ' ಕಾದಂಬರಿ ಬಿಡುಗಡೆ



**ಮಹಾನಗರ, ಆ.30:** ಕುಣಬಿ ಸಮುದಾಯದ ಬದುಕನ್ನು ಪರಿಚಯಿಸುವ 'ಬಲಿಪಾದ'ವು ಪರಿಚಿತ ಪ್ರಪಂಚ ದಾಚೆಗಿನ ಅಪರಿಚಿತ ಜಗತ್ತಿನ ಸತ್ಯ ದರ್ಶನ ಮಾಡಿಸುತ್ತದೆ ಎಂದು ಚಿಂತಕ ಲಕ್ಷ್ಮೀಶ್ ತೋಳ್ಪಾಡಿ ಹೇಳಿದ್ದಾರೆ.

ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕೇತನ, ಸ್ಪೆಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಗೆಳೆಯರ ಬಳಗ ಜಂಟಿಯಾಗಿ ಸ್ಪೆಂಟ್ ಅಲೋಶಿಯಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ। ಶ್ರೀಧರ ಬಳಗಾರ ಅವರ 'ಬಲಿಪಾದ' ಕಾದಂಬರಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕಾದಂಬರಿಯು ಓದಿನ ಕೊನೆಯಲ್ಲಿ ಜೀವನದ ಬಗ್ಗೆ ಆಳವಾದ ಪ್ರಜ್ಞೆ ಮೂಡಿಸುತ್ತದೆ. ಜೀವನಾನುಭವವನ್ನೇ ಪುನರ್ ಅಭಿನಯ ಮಾಡುವುದು ಸಾಹಿತ್ಯದ ಕೆಲಸ. ಆದರೆ ರಂಜನೆಗಾಗಿ ಈ ಅಭಿನಯ ಮಾಡಿದರೆ ಅದು ಅರ್ಥ ಕಳೆದುಕೊಳ್ಳುತ್ತದೆ ಎಂದು ತೋಳ್ಪಾಡಿ ಹೇಳಿದರು. ಕೃತಿಕಾರ ಶ್ರೀಧರ ಬಳಗಾರ ಮಾತನಾಡಿ, 'ಲೇಖಕನಾಗಿ ಲಿಪಿಕಾರನ ಪಾತ್ರ ನಿರ್ವಹಿಸಿದ್ದೇನೆ. ಅಪರಿಚಿತವಾಗಿದ್ದ ಬುಡಕಟ್ಟು ಸಮುದಾಯದ ಪರಿಚಯ ಮಾಡಿಕೊಳ್ಳುವ ಪ್ರಯತ್ನವನ್ನು ನಿರಂತರ 12 ವರ್ಷಗಳಿಂದ ಮಾಡಿಕೊಂಡು ಬಂದೆ. ಊರೊಂದು ಮುಳುಗಡೆಯಾಗಿ ಇಡೀ ಒಂದು ಸಮುದಾಯ ಕಂಗೆಟ್ಟ ಸ್ಥಿತಿಯ ಚಿತ್ರಣ ಕಾದಂಬರಿಯಲ್ಲಿದೆ ಎಂದರು. ಶ್ರೀಪೂರ್ಣ ಜನಪದ ಗೀತೆ ಹಾಡಿದರು. ಪ್ರೊ। ಮಹಾಲಿಂಗ ಭಟ್ ಸ್ವಾಗತಿಸಿದರು.



ESTD : 1880

*Varthabharathi 29-08-2026*

# ಜನತೆಯ ನಾಡಿಮಿಡಿತ



**ಡಾ.ವಿಜಯಲಕ್ಷ್ಮಿ ನಾಯಕ್**
ಸಹಾಯಕ ಪ್ರಾಧ್ಯಾಪಕರು,
ಸ್ಕೂಲ್ ಆಫ್ ಎಜುಕೇಶನ್ ಸಂತ
ಅಲೋಶಿಯಸ್ ವಿವಿ ಮಂಗಳೂರು

'ಪತ್ರಿಕೆ ಸಮಾಜದ ಕಣ್ಣು; ಸತ್ಯ ಅದರ ಬೆಳಕು' ಎಂಬ ಮಾತಿಗೆ ಅರ್ಥಪೂರ್ಣ ಸಾಕ್ಷಿಯಾಗಿ ಕಳೆದ 23 ವರ್ಷಗಳಿಂದ ಜನಮನದ ಕದ ತಟ್ಟುತ್ತಾ, ಸಮಾಜದ ಆಗುಹೋಗುಗಳಿಗೆ ಕನ್ನಡಿ ಹಿಡಿಯುತ್ತಾ ಮುನ್ನಡೆಯುತ್ತಿರುವ 'ವಾರ್ತಾಭಾರತಿ'ಗೆ ಹಾರ್ದಿಕ ಶುಭಾಶಯಗಳು.

ಕಾಲ ಬದಲಾದಂತೆ ಮಾಧ್ಯಮದ ರೂಪ ಬದಲಾಗಬಹುದು; ಆದರೆ ಸತ್ಯದ ಹುಡುಕಾಟ, ಜನಪರ ಕಾಳಜಿ ಮತ್ತು ಸಾಮಾಜಿಕ ಬದ್ಧತೆ ಎಂದಿಗೂ ಬದಲಾಗಬಾರದು. ಈ ಮೌಲ್ಯಗಳನ್ನು ಎದೆಯಲ್ಲಿಟ್ಟುಕೊಂಡು ವಾರ್ತಾಭಾರತಿ ತನ್ನ ಪಯಣವನ್ನು ಸಾರ್ಥಕಗೊಳಿಸಿದೆ. 'ಸತ್ಯಕ್ಕೆ ಸಾವಿಲ್ಲ, ನ್ಯಾಯಕ್ಕೆ ಸೋಲಿಲ್ಲ' ಎಂಬ ನಂಬಿಕೆಯನ್ನು ತನ್ನ ಪತ್ರಿಕೋದ್ಯಮದ ಮೂಲಕ ಜೀವಂತವಾಗಿರಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ವಾರ್ತಾಭಾರತಿ ಕೇವಲ ಸುದ್ದಿಯನ್ನು ನೀಡುವ ಪತ್ರಿಕೆಯಲ್ಲ; ಅದು ಜನರ ನಾಡಿಮಿಡಿತವನ್ನು ಆಲಿಸುವ ಮನಸ್ಸು, ಸಮಾಜದ ನೋವಿಗೆ ಮಿಡಿಯುವ ಹೃದಯ ಮತ್ತು ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಶಕ್ತಿ. ಸಾಮಾನ್ಯರ ಬದುಕಿನ ಕಥೆಗಳಿಗೆ, ಅಂಚಿನಲ್ಲಿರುವವರ ಆಶಯಗಳಿಗೆ ಹಾಗೂ ಸಮಾಜದ ವಿವಿಧ ಆಯಾಮಗಳಿಗೆ ಧ್ವನಿಯಾಗಿರುವ ಅದರ ಸೇವೆ ಶ್ಲಾಘನೀಯ.

24ನೇ ವರ್ಷದಲ್ಲಿ ಮತ್ತೊಂದು ಹೊಸ ಅಧ್ಯಾಯದ ಶುಭಾರಂಭವಾಗಲಿ. ಸತ್ಯದ ದೀಪ ಸದಾ ಬೆಳಗಲಿ, ಜನಪರತೆಯ ಧ್ವನಿ ಮತ್ತಷ್ಟು ಗಟ್ಟಿಯಾಗಲಿ, ವಾರ್ತಾಭಾರತಿಯ ಪಯಣ ಶತಮಾನಗಳತ್ತ ಸಾಗಲಿ. ವಾರ್ತಾಭಾರತಿ ಪತ್ರಿಕೆಯ ಆಡಳಿತ ಮಂಡಳಿಯ ಪ್ರತಿಯೊಬ್ಬ ಸದಸ್ಯರಿಗೂ ಹಾರ್ದಿಕ ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು.

# Digital News Links:

1. ಸಂತ ಅಲೋಶಿಯಸ್ ವಿ.ವಿ. ಮೊದಲ ಪದವಿ ಪ್ರಧಾನ ಸಮಾರಂಭ
   https://www.upayuktha.com/2026/08/St.-Aloysius-University-First-Convocation-Ceremony.html
2. Mangaluru: St Aloysius University holds its first Graduation Day 2026
   https://www.daijiworld.com/news/newsDisplay?newsID=1321584
3. Mangaluru: St Aloysius to host one-day national-level fest on Aug 8
   https://www.daijiworld.com/news/newsDisplay?newsID=1321708
4. Mangaluru: St Aloysius University celebrates Konkani Manyatha Diwas
   https://www.daijiworld.com/news/newsDisplay?newsID=1322843
5. Mangaluru: Eight pairs dance their way into Mogachi Lahran – Naach Baila Naach 3 grand finale
   https://www.daijiworld.com/news/newsDisplay?newsID=1323126
6. Mangaluru: St Aloysius University to host Science Academies lecture workshop
7. https://www.daijiworld.com/news/newsDisplay?newsID=1323125
8. Mangaluru: St Aloysius School of Engineering holds student clubs inauguration
   https://www.daijiworld.com/news/newsDisplay?newsID=1323165
9. Mangaluru: Eight pairs dance their way into Mogachi Lahran – Naach Baila Naach 3 grand finale
   https://www.daijiworld.com/news/newsDisplay?newsID=1323126
10. ಭಾರತದಲ್ಲಿ ಕ್ರೈಸ್ತ ಚಿಂತನೆ: ಸಂಸ್ಕೃತಿ, ನಂಬಿಕೆ ಮತ್ತು ಸಾಮಾಜಿಕ ಪರಿವರ್ತನೆ ಕುರಿತು ಜೆಪ್ಪು ಸೆಮಿನರಿಯಲ್ಲಿ ರಾಷ್ಟ್ರೀಯ ವಿಚಾರಸಂಕಿರಣ
    https://konkancatholic.com/national-symposium-on-christian-thought-in-india-explores-faith-culture-and-social-transformation-at-jeppu-seminary/
11. National Symposium on ‘Christian Thought in India’ Explores Culture, Faith, and Social Transformation at Jeppu Seminary
    https://www.mangalorean.com/national-symposium-on-christian-thought-in-india-explores-culture-faith-and-social-transformation-at-jeppu-seminary/
12. Mangaluru: St Aloysius AIMIT celebrates Onam with ‘Onaimit Ekaravam 2K26’
    https://www.daijiworld.com/news/newsDisplay?newsID=1323495
13. St Aloysius University to host lecture on novel Balipaada by Laxmeesha Tolpadi
    https://www.daijiworld.com/news/newsDisplay?newsID=1323823
14. St Aloysius University holds international conference on Sustain Invest 2026
    https://www.daijiworld.com/news/newsDisplay?newsID=1324099
15. Mangaluru: St Aloysius University celebrates arts and talent at ‘Kalothsava 2026’
    https://www.daijiworld.com/news/newsDisplay?newsID=1324125
16. Mangaluru: PhD awarded to A Vanaja of St Aloysius
    https://www.daijiworld.com/news/newsDisplay?newsID=1324280

## Digital News Links

**Dear User,**

**We invite you to visit** https://digitallibrary.staloysius.edu.in **to access the archives of news clippings related to our University. The archive serves as a valuable repository of media coverage, documenting important events, accomplishments, and developments of the University.**



ESTD : 1880